# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/95/14-15 ದಿನಾಂಕ : 06-08-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1)ಶ್ರೀ ಡಿ ನಾಗರಾಜ ತಂದೆ ಗುರುಮೂರ್ತಿ ಏಳುಬೆಂಚಿಗ್ರಾಮ ಬಳ್ಳಾರಿ ತಾಲೂಕು<br><br>(ಶ್ರೀ ಜೆ. ವೀರೇಶ ವಕೀಲರು ಬಳ್ಳಾರಿ) | 1)ವಿಶೇಷ ತಹಶೀಲ್ದಾರರು ಕುರುಗೋಡು<br>2)ಕಂದಾಯ ನಿರೀಕ್ಷಕರು ಕುರುಗೋಡು<br>3)ಗ್ರಾಮ ಲೆಕ್ಕಾಧಿಕಾರಿಗಳು ಏಳುಬೆಂಚಿ<br>4)ಶ್ರೀ ಎನ್ ಮಾರೆಪ್ಪ ತಂದೆ ನಸಪುಡಿ ತಿಮ್ಮಪ್ಪ ಏಳುಬೆಂಚಿಗ್ರಾಮ ಬಳ್ಳಾರಿ ತಾಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಏಳುಬೆಂಚಿ | 413/4 | 1.10 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಕುರುಗೋಡಿ ಇವರ M R No 140/09-10 ದಿನಾಂಕ 04-06-2010 ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 25-11-2014, 10-04-2015, 18-12-2015, 05-08-2016 ಮತ್ತು 06-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 06-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಏಳುಬೆಂಚಿ ಗ್ರಾಮದ ಸ.ನಂ 413/4 ವಿಸ್ತೀರ್ಣ: 1.10 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಕುರುಗೋಡು ಇವರ M R No 140/09-10 ದಿನಾಂಕ 04-06-2010 ರ ಆದೇಶದ ವಿರುದ್ಧ ಸಲ್ಲಿಸಿರುತ್ತಾರೆ. ಪ್ರಸ್ತಾಪಿತ ಜಮೀನುಗಳ ವಿವಾದಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ ವಾದಿಯು ಸದರಿ ಜಮೀನನ್ನು ಪ್ರತಿವಾದಿ 4 ರವರಿಂದ ನೋಂದಾಯಿತ ಕ್ರಯ ಪತ್ರ ಸಂಖ್ಯೆ 895/2013-14 ದಿನಾಂಕ 27-05-2013 ರಂದು ಖರೀದಿಸಿರುತ್ತಾರೆ. ಸದರಿ ಕ್ರಯ ಪತ್ರದಂತೆ ಮನವಿದಾರರು ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಲಾಗಿ ನಮೂನೆ 21 ರ ನೋಟಿಸ್ ಗೆ ಪ್ರತಿವಾದಿ 4 ರವರು ಸಹಿಮಾಡಿರುವುದಿಲ್ಲವೆಂದು ಕಂದಾಯ ನಿರೀಕ್ಷಕರು ಕುರುಗೋಡು ಇವರು ಹಕ್ಕು ಬದಲಾವಣೆಯನ್ನು ಗೈರು ಮಂಜೂರು ಮಾಡಿರುತ್ತಾರೆ.

ಮುಂದುವರೆದು ದಿನಾಂಕ 05-08-2016 ರಂದು ವಿಚಾರಣೆಗೆ ವಾದಿ ಮತ್ತು ವಾದಿಪರ ವಕೀಲರು ಹಾಜರಾಗಿದ್ದು ಈ ಗಾಗಲೆ ದಿನಾಂಕ 18-12-2015 ರಂದು ರಾಜಿ ಪತ್ರ ಹಾಜರು ಪಡಿಸಿರುವುದಾಗಿ ರಾಜಿ ಪತ್ರದಲ್ಲಿ ವಾದಿಹೆಸರಿಗೆ ಹಕ್ಕುಬದಲಾವಣೆ ಮಾಡುವ ಕುರಿತು ಅಭ್ಯಂತರವೇನೂ ಇರುವುದಿಲ್ಲವೆಂದು ಪ್ರತಿವಾದಿ 4 ರವರು ತಿಳಿಸಿ ರಾಜಿ ಪತ್ರಕ್ಕೆ ಸಹಿ ಮಾಡಿರುತ್ತಾರೆ. ಈ ಕುರಿತು ಎದುರುದಾರರನ್ನು ಗುರುತಿನ ಚೀಟಿಯೊಂದಿಗೆ ಈ ನ್ಯಾಯಾಲಕ್ಕೆ 12-08-2016 ರಂದು ಹಾಜರಾಗಲು ತಿಳಿಸಲಾಯಿತು , ದಿನಾಂಕ 06-08-2016 ರಂದು ಪ್ರತಿವಾದಿಯನ್ನು ವಾದಿಪರ ವಕೀಲರು